## ವಿಭಾಗ – 'ಎ'

### (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 16 × 1 = 16

1. ಅಮೆರಿಕಾದ ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿಯ ವೇಳೆ ತಂಗುವಂತಿಲ್ಲ ಏಕೆ ?
2. ಅಷ್ಟಾದಶಾಕ್ಷರೀ ಮಂತ್ರ ಯಾವುದು ?
3. ಕರ್ನಾಟಕದ ವಿಶಿಷ್ಟ ಗುಣ ಯಾವುದು ?
4. ಅನಿಲ್ ಕುಂಬ್ಳೆಯವರು ಫಿರೋಜ್ ಷಾ ಕೋಟ್ಲಾ ಮೈದಾನದಲ್ಲಿ ಸಾಧಿಸಿದ ವಿಶ್ವದಾಖಲೆ ಯಾವುದು ?
5. ಅನಿಲ್ ಕುಂಬ್ಳೆಯವರು ಕ್ರಿಕೆಟ್ ಮಾತ್ರವಲ್ಲದೆ ಇನ್ನಾವ ಕಲೆಯಲ್ಲಿ ಹೆಸರು ಮಾಡಿದ್ದರು ?
6. ಅನಿಲ್ ಕುಂಬ್ಳೆಯವರು ಭಾರತೀಯ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದುದು ಯಾವಾಗ ?
7. ದೇಸಾಯಿ ಈಶಪ್ರಭು ಕಿಡಿಕಿಡಿಯಾದುದೇಕೆ ?
8. ಕೋಗಿಲೆಯ ಹಾಡಿನ ತರಂಗಗಳ ಪರಿಣಾಮ ಏನಾಗಿದೆ ?
9. ಕೆ.ಎಸ್. ನಿಸಾರ್ ಅಹಮದ್‌ರವರು ಎಲ್ಲಾ ಧರ್ಮಗಳ ಉಸಿರು ಒಂದೇ ಎಂದು ಹೇಳಿರುವುದು ಏಕೆ ?
10. ರೈತನಿಗೆ ಮೋಡಗಳು ಹೇಗೆ ಕಾಣುತ್ತಿದ್ದವು ?
11. ಕೇಡಾದ ನಂತರ ಯಾವುದರ ಚಿಂತೆಯೆಂದು ಅಂಬಿಗರ ಚೌಡಯ್ಯ ಹೇಳಿದ್ದಾರೆ ?
12. ಯಾರ ಚಿಂತೆಯಲ್ಲಿ ಇದ್ದವರನ್ನು ಕಾಣಲಿಲ್ಲವೆಂದು ಅಂಬಿಗರ ಚೌಡಯ್ಯ ಹೇಳಿದ್ದಾರೆ ?
13. ಎಂಥವನು ಮಗನಲ್ಲವೆಂದು ಪುಲಿಗೆರೆ ಕವಿ ಸೋಮನು ಹೇಳಿದ್ದಾರೆ ?
14. ಎಂಥವನು ಋಷಿಯಲ್ಲವೆಂದು ಪುಲಿಗೆರೆ ಕವಿ ಸೋಮನು ಹೇಳಿದ್ದಾರೆ ?
15. ಧರ್ಮಪದನು ಕೊನಾರ್ಕ್ ದೇವಾಲಯಕ್ಕೆ ಏಕೆ ಬಂದನು ?
16. ಧರ್ಮಪದನು ಯಾವ ನದಿಯ ತೀರದ ಕಡೆಗೆ ಓಡಿಹೋದನು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 14 × 2 = 28

17. ಕರ್ನಾಟಕದ ಪ್ರಜೆಗಳೆಂಬ ಹೆಸರಿಗೆ ನಾವು ಪಾತ್ರರಾಗುವುದು ಯಾವಾಗ ?
18. ನಿವೃತ್ತಿಯ ನಂತರವೂ ಕುಂಬ್ಳೆಯವರು ಕ್ರಿಕೆಟ್ ಸಂಪರ್ಕವನ್ನು ಹೇಗೆ ಉಳಿಸಿಕೊಂಡರು ?
19. ರಾಮಸಿಂಗನಿಗೂ–ಸಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.
20. ತುಳಜಾಬಾಯಿ ಮತ್ತು ಕುಲಕರ್ಣಿಯರ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
21. ಕೆಳದಿಯ ರಾಣಿ ಚೆನ್ನಮ್ಮ ಮೊಘಲರ ಅಜಮತಾರನನ್ನು ಹೇಗೆ ಎದುರಿಸಿದಳು ?

